ಹೊರ ಹಾಕುತ್ತಾರೆ. ಪ್ರಾಮಾಣಿಕರು. ಲೋಕದಲ್ಲಿ ಸಕಾಲಕ್ಕೆ ಮಳೆಬೆಳೆ ನಡೆಯುತ್ತಿರುವುದು ಇಂಥವರಿಂದಲೇ.

ದೇಶಾಟನೆ ಮಾಡುವಾಗ ನೂರಾರು ಜನರ ಗೋಳು ಹುಯ್ದುಕೊಂಡಿರುವ ನಾನು, ರುಣಭಾರಕ್ಕೆ ಕಟ್ಟುಬಿದ್ದು ಭಾಷಣದ ಗಿಲೊಟಿನಿಗೆ ಕೊರಳು ಕೊಡುವುದುಂಟು. ಸಂಘಟಕರಾದರೂ ನಾವು ದೇಶದ ಆಸ್ತಿಯೆಂದೂ ನಮ್ಮ ಭಾಷಣವಿಲ್ಲದಿದ್ದರೆ ಸಾವಿರಾರು ಜನ ನಿರಾಶೆಯ ಮಡುವಿನಲ್ಲಿ ಮುಳುಗಿ ಸತ್ತೇ ಹೋಗುವರೆಂದೂ ಕಡಲೆಗಿಡ ಹತ್ತಿಸುವರು; ನಯವಾದ ನುಡಿಗಳಲ್ಲಿ ನಮ್ಮ ಯಾವುದಾದರೂ ಲೇಖನವನ್ನು ಹೊಗಳಿ, ನಿಮ್ಮ ದರ್ಶನವಾಗದೆ ಬಹಳ ಕಾಲವಾಯಿತು ಎಂದು ಹೂಬಾಣ ಬಿಟ್ಟು ಕರಗಿಸುವರು. ಅವರ ಹೊಗಳಿಕೆಯಲ್ಲಿ ಶೇಕಡಾ ಐವತ್ತು ನಿಜವಲ್ಲ ಎಂದು ಗೊತ್ತಿದ್ದರೂ ಹೊನ್ನಶೂಲಕ್ಕೆ ಏರಿರುತ್ತೇವೆ. ಒಮ್ಮೆ ಒಬ್ಬ ನಿರುದ್ಯೋಗಿ ಉದಯೋನ್ಮುಖ ಲೇಖಕ, ನಾನು ಸೆಮಿನಾರುಗಳಿಗೆ ಮಾತ್ರ ಹೋಗುವೆನೆಂದೂ ಹಿಂದುಳಿದ ಗ್ರಾಮೀಣ ಪ್ರದೇಶಗಳಿಗೆ ಬರುವ ಸಾಮಾಜಿಕ ಬದ್ಧತೆ ಇಲ್ಲದವನೆಂದೂ ಆಪಾದಿಸಿ, ಬ್ಲಾಕ್‌ಮೇಲ್ ಮಾಡಿ ತನ್ನೂರಿಗೆ ಕರೆಸಿಕೊಂಡಿದ್ದನು. ಪುಸ್ತಕ ಸಂಸ್ಕೃತಿಯ ಮೇಲೆ ನನ್ನ ಭಾಷಣ. ಹೋಗಿ ನೋಡಿದರೆ ಜನರೇ ಇಲ್ಲ. ಕೇಳಿದರೆ ಹೊಲದಿಂದ ದಣಿದು ಬಂದ ರೈತರು ವಿಶ್ರಾಂತಿ ತೆಗೆದುಕೊಂಡು ಆರಾಮಾಗಿ ಗುಡಿಕಡೆ ಬರುತ್ತಾರೆಂದು ಹೇಳಿ, ಒಂದು ಬೇವಿನಕಟ್ಟೆಯ ಮೇಲೆ ನನ್ನನ್ನು ಕೂರಿಸಿ, ಜನರನ್ನು ಕರೆಯಲು ಊರೊಳಗೆ ಹೋದನು. ನಾನು ಮನೆಗೆ ಮರಳುತ್ತಿದ್ದ ದನ ಕುರಿಗಳನ್ನು ನೋಡುತ್ತ ಅವುಗಳ ಗೊರಸಿನಿಂದೆದ್ದ ದೂಳಿಸೇವನೆ ಮಾಡುತ್ತ ಕೂತಿದ್ದೆ. ಒಬ್ಬರು ಹಿರಿಯರು ಊರಿಗೆ ಹೊಸಬನಾಗಿಯೂ ತಬ್ಬಲಿಯಂತೆಯೂ ಕುಳಿತಿದ್ದ ನನ್ನನ್ನು ವಿಚಾರಿಸಿದರು. ಪುಣ್ಯಕ್ಕೆ ಅವರು ನನ್ನ ಓದುಗರಾಗಿದ್ದರು. ನಿವೃತ್ತ ಶಿಕ್ಷಕರಾಗಿದ್ದ ಆ ಸಜ್ಜನರು, 'ಅಯ್ಯೊ ಎಂಥಾ ಕತೆಯಾಯ್ತಲ್ಲ. ನಮಿಗೆ ಈ ಕಾರ್ಯಕ್ರಮ ಇರೋದೇ ಗೊತ್ತಿಲ್ಲ. ಅವನ ಮಾತು ಕಟ್ಕೊಂಡು ಬಂದಿದ್ದೀರಲ್ಲ. ಚಂಗಲು ಅವನು. ಅದಕ್ಕೇ ಅವನಿಗೆ ಯಾರೂ ಹೆಣ್ಣು ಕೊಟ್ಟಿಲ್ಲ' ಎಂದು ಸಂಘಟಕನನ್ನು ಬಾಯಿಗೆ ಬಂದಂತೆ ಬೈದು, ತಮ್ಮ ಮನೆಗೆ ಕರೆದೊಯ್ದು ಉಪಚರಿಸಿದರು. ಬೇವಿನಕಟ್ಟೆಯ ಮೇಲೆ ನಿಂತು ನಾನು ಭಾಷಣ ಶುರುಮಾಡುವಾಗ ಇದ್ದುದು ಎಂಟು ಜನ. ಒಬ್ಬೊಬ್ಬರಾಗಿ ಬರುತ್ತ ಹದಿನೇಳು ಮುಟ್ಟಿತು. ಗ್ರಾಮೀಣ ಪ್ರದೇಶದಲ್ಲಿ ಅದೇನು ಕಮ್ಮಿ ಸಂಖ್ಯೆಯಲ್ಲ.

ಒಳ್ಳೆಯ ರಸ್ತೆ, ಸಹೃದಯ ಸಂಘಟಕರು, ಸಾಹಿತ್ಯಾಭಿರುಚಿಯ ಕೇಳುಗರು ಇರುವ ಕಾರ್ಯಕ್ರಮವಾದರೆ, ಹೊಸ ಊರುಗಳನ್ನೂ ರಸ್ತೆ ಪಕ್ಕದ ಹೊಲಗಳಲ್ಲಿ ಬೆಳೆದ ಸುರೇಪಾನ ಜೋಳ, ಕಡಲೆ ಫಸಲನ್ನೂ ನೋಡುತ್ತ ಖುಶಿಯಾಗಿ ಪಯಣಿಸುತ್ತೇನೆ. ಕೆಟ್ಟರಸ್ತೆಯ ಕಾಟಾಚಾರಕ್ಕೆ ಕರೆದ ಕಾರ್ಯಕ್ರಮಕ್ಕೆ ಒಪ್ಪಿಕೊಂಡೆನೊ, ಒದ್ದಾಟ ಶುರು. ಆಹ್ವಾನಪತ್ರಿಕೆ ಬಂದಾಗ ಫಾಶಿ ಬಿಗಿದಂತಾಗಿ ಕಾರ್ಯಕ್ರಮದ ಮುನ್ನಾದಿನ ಕೈಕಾಲು ಸಡಿಲವಾಗುತ್ತವೆ. ಮುಖದ ಮೇಲೆ ಮ್ಲಾನತೆಯ ಚಾದರ ಕವಿಯುತ್ತದೆ. ಒಪ್ಪಬಾರದಿತ್ತು ಎಂದು ಹಣೆ ಚಚ್ಚಿಕೊಳ್ಳುತ್ತೇನೆ. ಈ ವಿಷಯದಲ್ಲೆಲ್ಲ ತಲೆಹಾಕದ ಹೆಂಡತಿ ಬಾನು ದೂರನಿಂತು ಗಮನಿಸುತ್ತಿರುತ್ತಾಳೆ. ಬೆನ್‌ಕೆಳಗಾಗಿ ಬಿದ್ದ ಜೀರುಂಡೆ ಮಗ್ಗಲು ಬದಲಿಸಲು ರೆಕ್ಕೆಬಡಿಯುತ್ತ ಒದ್ದಾಡುವುದನ್ನು ಮಕ್ಕಳು ಮೋಜಿನಿಂದ ನೋಡುವ ನೋಟವದು. 'ನಿನ್ನನ್ನು ಒಪ್ಪಿಕೊ ಎಂದವರು ಯಾರು? ಕಾಯಿಲೆ ಬಿದ್ದ ಅಮ್ಮನನ್ನು ನೋಡಿಬರೋಣ ಎಂದರೆ ಬರಲಿಲ್ಲ. ಅಕ್ಕನ ಮಗಳ ಸೀಮಂತಕ್ಕೆ ಹೆಂಗಸರ ಕಾರ್ಯಕ್ರಮ ಅಂದಿದ್ದೆ; ಹಜ್ ಹೊರಟ ಅಣ್ಣನಿಗೆ